# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| 2 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 906 |
| 3 | ಉತ್ತರಿಸಬೇಕಾದ ದಿನಾಂಕ | : | 14-03-2025 |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 5 ವರ್ಷದಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೂ ಎಷ್ಟು ಅನುದಾನ ಬಿಡುಗಡೆಯಾಗಿದೆ. ಬಿಡುಗಡೆಯಾಗಿರುವ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದೆಯೇ</td><td>ಕಳೆದ 5 ವರ್ಷದಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ.<br>(ರೂ.ಕೋಟಿಗಳಲ್ಲಿ)
<table>
<tr><th>ವರ್ಷ</th><th>ಪ್ರಾರಂಭಿಕ ಶಿಲ್ಕು</th><th>ಬಿಡುಗಡೆ</th><th>ವೆಚ್ಚ</th><th>ಉಳಿಕೆ</th></tr>
<tr><td>2019-20</td><td>203.07</td><td>4037.96</td><td>4110.32</td><td>130.71</td></tr>
<tr><td>2020-21</td><td>130.71</td><td>5691.57</td><td>5408.97</td><td>413.31</td></tr>
<tr><td>2021-22</td><td>413.31</td><td>5892.64</td><td>5878.95</td><td>427.00</td></tr>
<tr><td>2022-23</td><td>427.00</td><td>6352.81</td><td>6272.35</td><td>507.46</td></tr>
<tr><td>2023-24</td><td>510.68</td><td>5415.06</td><td>5719.64</td><td>206.10</td></tr>
</table>
• 2019-20 ರಿಂದ 2023-24 ರವರೆಗಿನ ಮಾಹಿತಿಯು ಆಡಿಟ್ ವರದಿಯಂತೆ ನೀಡಲಾಗಿದೆ.<br>ಹಿಂದಿನ ಆರ್ಥಿಕ ವರ್ಷದಲ್ಲಿ ಉಳಿಕೆಯಾಗುವ ಅನುದಾನವನ್ನು ಮುಂಬರುವ ಆರ್ಥಿಕ ವರ್ಷದಲ್ಲಿ ಬಳಕೆ ಮಾಡಿಕೊಳ್ಳಲಾಗುವುದು. ಆದ್ದರಿಂದ ಬಿಡುಗಡೆಯಾಗುವ ಅನುದಾನವು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಿರುತ್ತದೆ.</td></tr>
<tr><td>ಆ)</td><td>ರಾಜ್ಯದಲ್ಲಿ ಒಂದೇ ವರ್ಷದಲ್ಲಿ 669.92 ಕೋಟಿ ರೂಪಾಯಿಗಳು ದುರ್ಬಳಕೆಯಾಗಿರುವುದು ಲೆಕ್ಕ ಪರಿಶೋಧನಾ ವರದಿಯಲ್ಲಿ ಪತ್ತೆ ಆಗಿರುವುದು ನಿಜವೇ ಹಾಗಿದ್ದಲ್ಲಿ ಯಾವ ಇಲಾಖೆಯಲ್ಲಿ ಎಷ್ಟು ಹಣ ದುರುಪಯೋಗವಾಗಿದೆ. (ಅದರ ಪೂರ್ಣ ವಿವರ ಒದಗಿಸುವುದು.)</td><td>ಸಾಮಾಜಿಕ ಪರಿಶೋಧನಾ ನಿರ್ದೇಶಕರು 2022-23ನೇ ಸಾಲಿನ ನರೇಗಾ ಯೋಜನೆಯಡಿ ಅನುಷ್ಠಾನಗೊಂಡ ಕಾಮಗಾರಿಗಳ ವಾರ್ಷಿಕ ವರದಿಯನ್ನು ದಿನಾಂಕ:21.09.2024 ರಂದು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಗ್ರಾಮ ಪಂಚಾಯಿತಿ ಹಾಗೂ ಅನುಷ್ಠಾನ ಇಲಾಖಾವಾರು ದುರುಪಯೋಗದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತಗಳನ್ನು ಕೆಳಕಂಡಂತೆ ನಮೂದಿಸಿರುತ್ತಾರೆ.
<table>
<tr><th rowspan="2">ಕ್ರ ಸಂ</th><th rowspan="2">ಇಲಾಖೆಗಳ ಹೆಸರು</th><th colspan="2">ಹಣಕಾಸಿನ ದುರುಪಯೋಗ</th></tr>
<tr><th>ಪ್ರಕರಣಗಳ ಸಂಖ್ಯೆ</th><th>ಮೊತ್ತ ರೂಗಳಲ್ಲಿ</th></tr>
<tr><td>1</td><td>ಗ್ರಾಮ ಪಂಚಾಯಿತಿ</td><td>17084</td><td>149821072</td></tr>
<tr><td>2</td><td>ಸಾಮಾಜಿಕ ಅರಣ್ಯ ಇಲಾಖೆ</td><td>752</td><td>12170402</td></tr>
<tr><td>3</td><td>ಪ್ರಾದೇಶಿಕ ಅರಣ್ಯ</td><td>54</td><td>1400118</td></tr>
<tr><td>4</td><td>ಕೃಷಿ ಇಲಾಖೆ</td><td>846</td><td>9964502</td></tr>
<tr><td>5</td><td>ತೋಟಗಾರಿಕೆ ಇಲಾಖೆ</td><td>1330</td><td>18944737</td></tr>
<tr><td>6</td><td>ಪಂ.ರಾ.ಇಂ ಇಲಾಖೆ</td><td>398</td><td>7365726</td></tr>
<tr><td>7</td><td>ರೇಷ್ಮೆ ಇಲಾಖೆ</td><td>337</td><td>7047421</td></tr>
<tr><td>8</td><td>ಜಲಾನಯನ</td><td>41</td><td>957946</td></tr>
<tr><td>9</td><td>ಸಣ್ಣ ನೀರಾವರಿ</td><td>21</td><td>237648</td></tr>
<tr><td colspan="2">ಒಟ್ಟು</td><td>20,863</td><td>20,79,09,872</td></tr>
</table>
ರೂ.669.92ಕೋಟಿಗಳಲ್ಲಿ ರೂ.20.79ಕೋಟಿಗಳು ದುರುಪಯೋಗದ ಮೊತ್ತ ಆಗಿರುತ್ತದೆ. ಇನ್ನುಳಿದಂತೆ ಹಣಕಾಸಿನ ವಿಚಲನೆ ಮೊತ್ತ ರೂ.527.25 ಕೋಟಿ ಹಾಗೂ ಪ್ರಕ್ರಿಯೆ ಉಲ್ಲಂಘನೆ ಮೊತ್ತ ರೂ.121.88 ಕೋಟಿಗಳು ದುರುಪಯೋಗದ ಮೊತ್ತದ ವ್ಯಾಪ್ತಿಗೆ ಬರುವುದಿಲ್ಲ.<br>ಸಾಮಾಜಿಕ ಪರಿಶೋಧನಾ ವರದಿಯಲ್ಲಿ ನಮೂದಿಸಿರುವ ದುರುಪಯೋಗದ ಮೊತ್ತ ರೂ.20.79ಕೋಟಿಗಳಲ್ಲಿ MIS ವರದಿಯಂತೆ ಇದುವರೆಗೆ ರೂ.12.83ಕೋಟಿಗಳ ಬಗ್ಗೆ ಅಡ್‌ಹಾಕ್ ಸಮಿತಿ ಮತ್ತು ಗ್ರಾಮ ಸಭೆಯಲ್ಲಿ ಅನುಮೋದಿಸಿರುವಂತೆ ರೂ.9.81ಕೋಟಿಗಳನ್ನು ನಿಯಮಾನುಸಾರ ಕೈಬಿಟ್ಟಿದ್ದು, ಉಳಿಕೆ ರೂ.3.07ಕೋಟಿಗಳಲ್ಲಿ ರೂ.3.02ಕೋಟಿ ಇದುವರೆಗೆ ವಸೂಲಾತಿ ಮಾಡಲಾಗಿದೆ. ಉಳಿದ ಮೊತ್ತ ವಸೂಲಿ ಮಾಡಲು ಕ್ರಮ ವಹಿಸಲಾಗುತ್ತಿದೆ.</td></tr>
</table>

<table>
<tr>
<td>ಇ)</td>
<td>ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮೃತಪಟ್ಟವರ ಹೆಸರಿನಲ್ಲಿ 2.89 ಕೋಟಿ ರೂಪಾಯಿಗಳನ್ನು ಕೂಲಿ ರೂಪದಲ್ಲಿ ನೀಡಲಾಗಿದೆಯೇ; ಹಾಗಿದ್ದಲ್ಲಿ ಇಂಥ ಎಷ್ಟು ಪ್ರಕರಣಗಳು ಬೆಳಕಿಗೆ ಬಂದ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td>
<td>2022-23ನೇ ಸಾಲಿಗೆ ಸಂಬಂಧಿಸಿದಂತೆ ಸಾಮಾಜಿಕ ಪರಿಶೋಧನಾ ವರದಿಯಲ್ಲಿ ನಮೂದಿಸಲಾದ ರೂ.2.89ಕೋಟಿಗಳಲ್ಲಿ ಸತ್ತವರ ಹೆಸರಿನಲ್ಲಿ ಪಾವತಿ, ಅನರ್ಹ ವ್ಯಕ್ತಿಗಳ ಹೆಸರಿನಲ್ಲಿ ಪಾವತಿ ಹಾಗೂ ಕೆಲಸಕ್ಕೆ ಬರದಿದ್ದರೂ ಕೂಲಿ ಹಣ ಪಾವತಿ ಮಾಡಿರುವ ವಿವರಗಳು ಹಾಗೂ ಇದುವರೆಗೆ ವಸೂಲಾತಿಯಾದ ಮೊತ್ತದ ಅಂಕಿ ಅಂಶಗಳನ್ನು ಕೆಳಕಂಡಂತೆ ಒದಗಿಸಲಾಗಿದೆ.
<table>
<tr><th colspan="3">ಸತ್ತವರ ಹೆಸರಿನಲ್ಲಿ ಪಾವತಿ</th></tr>
<tr><th>ಪ್ರಕರಣಗಳ ಸಂಖ್ಯೆ</th><th>ಪಾವತಿಸಿರುವ ಮೊತ್ತ</th><th>ವಸೂಲಾತಿಯಾದ ಮೊತ್ತ</th></tr>
<tr><td>638</td><td>21,86,551</td><td>11,17,367</td></tr>
</table>
<table>
<tr><th colspan="3">ಅನರ್ಹ ವ್ಯಕ್ತಿಗಳ ಹೆಸರಿನಲ್ಲಿ ಪಾವತಿ</th></tr>
<tr><th>ಪ್ರಕರಣಗಳ ಸಂಖ್ಯೆ</th><th>ಪಾವತಿಸಿರುವ ಮೊತ್ತ</th><th>ವಸೂಲಾತಿಯಾದ ಮೊತ್ತ</th></tr>
<tr><td>1005</td><td>4224286</td><td>1324412</td></tr>
</table>
<table>
<tr><th colspan="3">ಕೆಲಸಕ್ಕೆ ಬರದಿದ್ದರೂ ಕೂಲಿ ಹಣ ಪಾವತಿ</th></tr>
<tr><th>ಪ್ರಕರಣಗಳ ಸಂಖ್ಯೆ</th><th>ಪಾವತಿಸಿರುವ ಮೊತ್ತ</th><th>ವಸೂಲಾತಿಯಾದ ಮೊತ್ತ</th></tr>
<tr><td>6668</td><td>20401351</td><td>479815</td></tr>
</table>
ಸದರಿ ವರದಿಯನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದಿನಾಂಕ:08.10.2024 ರಂದು ಒದಗಿಸಿದ್ದು, ಸಾಮಾಜಿಕ ಪರಿಶೋಧನಾ ನಿರ್ದೇಶಕರು ವರದಿಯಲ್ಲಿ ನಮೂದಿಸಲಾದ ಪ್ರತಿಯೊಂದು ದುರುಪಯೋಗದ ಹಾಗೂ ಕಡತ ಒದಗಿಸದೇ ಇರುವ ಪ್ರಕರಣಗಳನ್ನು ತಾಲ್ಲೂಕು ಮಟ್ಟದ ಅಡ್‌ಹಾಕ್ ಸಮಿತಿಯಲ್ಲಿ ವಿಚಾರಣೆ ನಡೆಸಿ ಒಂದು ತಿಂಗಳೊಳಗಾಗಿ ದುರುಪಯೋಗ ಮೊತ್ತದ ವಸೂಲಾತಿಯ ಬಗ್ಗೆ ಕಟ್ಟುನಿಟ್ಟಿನ ಸೂಚನೆಯನ್ನು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಜಾರಿ ಮಾಡುವಂತೆ ಸೂಚಿಸಲಾಗಿದೆ.</td>
</tr>
<tr>
<td>ಈ)</td>
<td>2013-14ನೇ ಸಾಲಿನಿಂದ 2022-23ನೇ ಸಾಲಿನವರೆಗೆ ಕೈಗೊಂಡಿರುವ ಕಾಮಗಾರಿಗಳ ಕೂಲಿ ಮೊತ್ತದಲ್ಲಿ ಸುಮಾರು ರೂ.4500ಕೋಟಿ ಮೊತ್ತಕ್ಕೆ ಯಾವುದೇ ದಾಖಲೆ ಸಲ್ಲಿಕೆಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿ ಏನು?</td>
<td>ಸಾಮಾಜಿಕ ಪರಿಶೋಧನಾ ನಿರ್ದೇಶಕರು 2013-14ನೇ ಸಾಲಿನಿಂದ 2022-23ನೇ ಸಾಲಿನ ವರೆಗಿನ ಸಾಮಾಜಿಕ ಪರಿಶೋಧನೆಯನ್ನು ನಡೆಸಿ ಸಲ್ಲಿಸಲಾದ ವರದಿಯಲ್ಲಿ, ರಾಜ್ಯದ 31 ಜಿಲ್ಲೆಗಳಿಂದ ಸಾಮಾಜಿಕ ಪರಿಶೋಧನೆಗೆ ಕಡತ ಒದಗಿಸದೇ ಇರುವ ಪ್ರಕರಣಗಳ ಸಂಖ್ಯೆ 92196 ಗಳಾಗಿದ್ದು, ಪಾವತಿಸಲಾದ ಮೊತ್ತ ರೂ.1169.53ಕೋಟಿಗಳಾಗಿರುತ್ತದೆ.<br>ಗ್ರಾಮ ಸಭೆಯು ನಿಯಮಾನುಸಾರ ವಿಚಾರಣೆ ನಡೆಸಿ 19529 ಪ್ರಕರಣಗಳನ್ನು ಕೈಬಿಟ್ಟಿದ್ದು, ಇದರ ಮೊತ್ತ ರೂ.154.40ಕೋಟಿಗಳಾಗಿರುತ್ತದೆ. ಉಳಿದ ಪ್ರಕರಣಗಳ ಬಗ್ಗೆ ಅಡ್‌ಹಾಕ್ ಸಮಿತಿಯಲ್ಲಿ ಚರ್ಚಿಸಿ ಅಂತಿಮವಾಗಿ ಗ್ರಾಮ ಸಭೆಯಲ್ಲಿ ಮಂಡಿಸಲು ಕ್ರಮ ವಹಿಸಲಾಗುತ್ತಿದೆ.</td>
</tr>
</table>

| | | |
|---|---|---|
| | | ನರೇಗಾ ಯೋಜನೆಯಡಿ ಅನುಷ್ಠಾನಗೊಂಡ ಕಾಮಗಾರಿಗಳಲ್ಲಿ ಮೊದಲ ಸಹಿದಾರರಿಂದ ಸಾಮಗ್ರಿ ಮೊತ್ತವನ್ನು ಪಾವತಿಸುವ ಮೊದಲು ದಾಖಲೆಗಳ 100% ಪರಿಶೀಲನೆ ಮತ್ತು ಸ್ಥಳ ಭೇಟಿ ನಡೆಸಲಾಗುತ್ತದೆ. ಸರ್ಕಾರಿ ಹಣ ದುರುಪಯೋಗಪಡಿಸಲು ಕಾರಣರಾದ ಸರ್ಕಾರಿ ನೌಕರರು/ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿಯಮಗಳು-2011, ನಿಯಮ-7(3)(F) ರಡಿಯಲ್ಲಿ ಹೊರಗುತ್ತಿಗೆ ನೌಕರರು ದುರುಪಯೋಗಪಡಿಸಿಕೊಂಡ ಮೊತ್ತವನ್ನು ಮರುಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯಡಿ ಗ್ರಾಮ ಪಂಚಾಯತ್‌ಗಳ ಸದಸ್ಯರು ಮತ್ತು ಅಧ್ಯಕ್ಷರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದ್ದು, ವಿಚಾರಣಾ ವರದಿಯ ಮೇಲೆ ದುರುಪಯೋಗದ ಮೊತ್ತವನ್ನು ವಸೂಲಿ ಮಾಡುವ ಕ್ರಮ ಕೈಗೊಳ್ಳಲಾಗುತ್ತಿರುವುದಲ್ಲದೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುತ್ತಿದೆ. ಸಾಮಾಜಿಕ ಪರಿಶೋಧನೆಗೆ ಕಡತ ಒದಗಿಸದಿರುವ ಪ್ರಕರಣಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸರ್ಕಾರದ ಸುತ್ತೋಲೆ ಸಂ:ಗ್ರಾಅಪ 60 ಜಿಪಾ 2024 ದಿನಾಂಕ: 05.06.2024ರಲ್ಲಿ ಸೂಚನೆ ನೀಡಲಾಗಿದ್ದು, ಸದರಿ ಸೂಚನೆಯಲ್ಲಿ ಕಡತ ಒದಗಿಸಲು ವಿಫಲರಾದ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಅನುಷ್ಠಾನ ಇಲಾಖೆಯ ಅಧಿಕಾರಿಗಳಿಗೆ ದಂಡನೆ ನಿಗದಿಪಡಿಸಲಾಗಿದೆ. |

**ಸಂಖ್ಯೆ: ಗ್ರಾಅಪ/121(16)/ಉಖಾಯೋ/2025**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು